ಓಎಸ್ ನಂಃ 239/2017 ಪಿಡಬ್ಲ್ಯೂ- 2

ದಿನಾಂಕಃ 18.01.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಎಂ.ಜೆ ವಕೀಲರಿಂದಃ

ಪ್ರಸ್ತುತ ದಾವೆಯ ಯಾವ ಸ.ನಂ. ಗೆ ಹಾಕಿರುತ್ತಾರೆಂದು ಗೊತ್ತಾ ಎಂದರೆ ಗೊತ್ತು ಎನ್ನುತ್ತಾರೆ. ವಾದಿ ಯಾವ ಸ.ನಂ. ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸ.ನಂ. 30/4 ಎನ್ನುತ್ತಾರೆ. ಪ್ರತಿವಾದಿ ಯಾವ ಸ.ನಂ. ಗೆ ದಾವೆಯನ್ನು ಹಾಕಿರುತ್ತಾರೆಂದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಬೋರೆಗೌಡರಿಗೆ ಎಷ್ಟು ಜನ ಗಂಡು ಮಕ್ಕಳು ಎಂದರೆ ಸಣ್ಣಜವರೆಗೌಡ , ಸುಬ್ಬೆಗೌಡ ಮತ್ತು ಪುಟ್ಟಮ್ಮ ಎನ್ನುತ್ತಾರೆ. ಸ,ನಂ. 113 ರಲ್ಲಿ 33 ವರೆ ಗುಂಟೆ ಜಮೀನು ಯಾರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಸುಬ್ಬೇಗೌಡ ಹಾಗೂ ಸಣ್ಣಜವರೆಗೌಡ ಇಬ್ಬರು ಉಳಿಮೆ ಮಾಡುತ್ತಿರುತ್ತಾರೆ ಎನ್ನುತ್ತಾರೆ. ಸರಿದ ಜಮೀನು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸ.ನಂ. 140/2 ಬಿಪಿ1 ಎಷ್ಟು ಎಕರೆ ಇರುತ್ತದೆ ಎಂದರೆ ಸಾಕ್ಷಿಯು ಸುಬ್ಬೇಗೌಡ ಹಾಗೂ ಸಣ್ಣಜವರೆಗೌಡ ಇಬ್ಬರು ಖರೀದಿ ಮಾಡಿರುತ್ತಾರೆ ಅದರಲ್ಲಿ ಸಣ್ಣಜವರೆಗೌಡ ಹೆಂಡತಿ ನಾಗಮ್ಮ ಬೇರೆಯವರಿಗೆ ಕ್ರಯ ಕೊಟ್ಟಿರುತ್ತಾರೆ. ಉಳಿಕೆ 20 ಗುಂಟೆಯನ್ನು ಸುಬ್ಬೆಗೌಡರು ಉಳಿಸಿ ಕೊಂಡಿರುತ್ತಾರೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ್ದು ಸಮಯ ನೀಡಲಾಯಿತು.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ